ಅವಲಕ್ಕಿ ಕೊಡುವ ಮೊದಲೇ ಸೀತಕ್ಕ ಬಾಗಿಲ ಮೆಟ್ಟಿನ ಮೇಲೆಯೇ ಕೂತು ರಾತ್ರಿಯೆಲ್ಲ ತಡೆದು ಹಿಡಿದ ಸುದ್ದಿ ಮೋರೆ ತೊಳೆಯದ ಬಾಯಿಯಿಂದಲೇ ಹೇಳುತ್ತ ಕುಳಿತಳು. ಸೀತಕ್ಕನ ಮಾತಿಗೆ ಮರುಳಾಗಿ ಕೇಳುತ್ತ ತಾನೂ ಅಲ್ಲಿಯೇ ಮೆಟ್ಟಲ ಮೇಲೆ ಕುಳಿತುಬಿಟ್ಟಳು. ಗೌಡನ ಹೆಂಡತಿ.

'ಸೀತಕ್ಕನ ಮನೆಯಲ್ಲಿ ದೆವ್ವ...'

ಸುದ್ದಿ ಅಲ್ಲಿಂದ ಹೊರಟು ಊರೆಲ್ಲ ತಲುಪುವುದಕ್ಕೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ಅಂಬಿಕಾ ರೆಸ್ಟೋರಂಟಿನಲ್ಲಿ ಚಹ ಕುಡಿಯಲು ಬಂದ ಮಂದಿ ಬೇರೆ ಮಾತನ್ನೇ ಆಡಲಿಲ್ಲ. ಬರೇ ಸೀತಕ್ಕನ ಮನೆಯ ದೆವ್ವದ ಸುದ್ದಿಯನ್ನೇ ಆಡಿ ಬಾಯಿಯ ತಿಂಡಿ ತೀರಿಸಿಕೊಂಡರು. ಡ್ರ್ಯಾವರ, ಕಂಡಕ್ಟರ ಕೂಡ ಈ ವಿಷಯದಲ್ಲಿ ಸಮ್ಮತಿ ತೋರಿಸಿ ಸಂತಾಪ ವ್ಯಕ್ತಪಡಿಸಿ ಆ ಸುದ್ದಿಯನ್ನು ತೆಗೆದುಕೊಂಡೇ ಹೋಗಿಬಿಟ್ಟರು. ಅಂದೆಲ್ಲ ಈ ದೆವ್ವದ ಸುದ್ದಿ ಊರ ಮಂದಿಯ ತರ್ಕದ ವಿಷಯವಾಗಿಬಿಟ್ಟಿತು. ಅಪ್ಪಣ್ಣ ಕಾಮತರು, ಬೀಡಿ ಅಂಗಡಿಯ ಬಾಬು ಎಲ್ಲರೂ ಅಲ್ಲಿ ಹೌದೆಂದೇ ನಂಬಿದ ನಂತರ ಊರಿನಲ್ಲಿ ಇಲ್ಲವೆಂದು ವಾದಿಸುವ ಜನ ಕಡಿಮೆಯಾಯಿತು. ಆದರೂ ಕೆಲವು ಕಾಲೇಜು ಕಲಿತ ರಾಯರ ಮಕ್ಕಳು ಅಲ್ಲವೆಂದು ವಾದಿಸಿದರು. ಕನ್ನಡ ಸಾಲೆಯಲ್ಲಿ ಅದೇ ಮಾತನ್ನು ತಲೆಯಲ್ಲಿ ತುಂಬಿಕೊಂಡ ಮಾಸ್ತರರು ಮಕ್ಕಳಿಗೆಲ್ಲ ಅಂದು ದೆವ್ವದ ಕತೆಯನ್ನೇ ಹೇಳಿದರು. ಅಂಗಡಿಯಲ್ಲಿಯೆ ಸೆಟ್ಟರು ಬಂದ ಗಿರಾಕಿಗಳಿಗೆಲ್ಲ ಇದೇ ಪ್ರಶ್ನೆ ಕೇಳಿದರು. ಊರು ಒಂದು ವ್ಯಕ್ತ ಅಭಿಪ್ರಾಯವನ್ನು ಹೊತ್ತುಕೊಂಡೇ ತಿರುಗಿತು. ಯಾರ ಮಾತನ್ನೂ ಕೇಳದೇ ಸೀತಕ್ಕ ಮಧ್ಯಾಹ್ನದ ಆರು ತಾಸಿನ ಸುಡುವ ಬಿಸಿಲಿನಲ್ಲಿ ಹೊನ್ನಪ್ಪ ದೇವರ ಮನೆಗೆ ಹೋಗಿ ಗುನಗುನ ಹತ್ತರ ಪ್ರಶ್ನೆಯ ಪುಡಿ ಕೇಳಿಸಿದಳು. ತೆಂಗಿನಕಾಯಿ, ಬಾಳೇಹಣ್ಣು, ಕಡ್ಡಿ ಕರ್ಪೂರ ಎಲ್ಲ ದೇವರ ಮುಂದಿಟ್ಟು, ಡಬ್ಬಿಗೆ ನಾಲ್ಕಾಣೆ ಪಾವಲಿ ಸೇವೆಗೆ ಇಟ್ಟು ಮುಡಗಿಕೊಂಡು ಅಲ್ಲಿಯೇ ಕಂಬಕ್ಕೆ ಆನಿಸಿ ಕುಳಿತು ಕೇಳಿದಳು.

ಊರ ಸಾಮಾನ್ಯ ಸುದ್ದಿ ಮುಗಿಸಿ ದೇವರ ಕಡೆಗೂ ತುಸು ಧ್ಯಾನ ಹೊರಳಿಸಿ ಬದಿಯಲ್ಲಿ ಇಟ್ಟುಕೊಂಡ ನೀರಿನ ಚಂಬಿನಲ್ಲಿ ಕೈ ಇಟ್ಟುಕೊಂಡ ಗುನಗ ದೇವರಿಗೇ ಆಜ್ಞೆ ಮಾಡಿದಂತೆ ಗುಡುಗಿದ:

'ಸೀತಾಬಾಯಿ... ಸೀತಕ್ಕ ಕೇಳುವ, ಕೇಳಿಕೊಳ್ಳುವಂಥ ಪ್ರಾರ್ಥನೆ ನಿನ್ನ ಹತ್ತಿರ. ಅದೇನೆಂದರೇ— ನಿನ್ನೆ ರಾತ್ರಿ ಎದುರು ಕತ್ತಲಿನ ಮೂರು ಸಂಜೆಯ ಹೊತ್ತಿಗೆ ಅವಳು ತನ್ನಷ್ಟಕ್ಕೇ ತಾನೇ ಇದ್ದಾಗ ಯಾರ ಗೊಡವೆಗೂ ಹೋಗದೆ ತಾನೇನು ತನ್ನ ಕೆಲಸವೇನು ಎನ್ನುವಂತಹ ಪಾಡಿನಲ್ಲಿ ಇರುವಾಗ, ಮನೆಯ ಎದುರು ಬಾಗಿಲಲ್ಲಿ ಮಾಳಪ್ಪ ಶ್ಯಾನುಭೋಗ ಎನ್ನುವಂಥವನ ಭೂತ ಬಂದು ಬಾಗಿಲು ತಟ್ಟಿ ಕರೆದ ಹಾಗಾಗಿ ಅವಳು ಹೊರಗೆ ಬಂದು ನೋಡಿದಾಗ ಬಾಗಿಲಲ್ಲಿ ಆ ದೆವ್ವ ನಿಂತಿದ್ದು ಅವಳು ಕಣ್ಣಿನಿಂದ ಸ್ವತಃ ನೋಡಿದಂತಹ ಸಂಗತಿ. ಈ ವಿಷಯಕ್ಕೆ ಅವಳು ಕಂಗಾಲಾಗಿಬಿಟ್ಟಿದ್ದಾಳೆ: ಸ್ವಾಮಿ! ಆದ್ದರಿಂದ ಅವಳ ಮನೆಗೆ ನಿನ್ನೆ ದೆವ್ವ ಬಂದಂಥದ್ದು ಭೂತ ಹೌದೂ ಅಂತಾದ್ರೆ ಮಹಾರಾಯಾ ಒಡೆಯಾ ಒಂದು ಕೆಂಪು ಕೊಡು' ಎಂದು ದೇವರಿಗೆ ಪ್ರಶ್ನೆ ಕೇಳಿ 'ಹಾಂ, ಕೆಂಪು' ಎಂದು ಒಂದು ಪುಡಿಯನ್ನು ತಂಬಿಗೆಯೊಳಗಿಂದ ಎತ್ತಿ ಅಲ್ಲಿಯೇ ಒಗೆದ.

ಇದರ ನಂತರ ಇನ್ನೊಂದು ಪುಡಿ ಕೇಳುವುದು ಉಳಿಯಿತು. ಅದು ಇನ್ನು ಮುಂದೆ ಹಾಗೆ ಭೂತ ಬಂದು ಕಾಡದ ಹಾಗೆ ಪರಿಹಾರಕ್ಕಾಗಿ ಅದನ್ನು ಹಾಗೆ ಕೇಳುವ ಮೊದಲು ಗುನಗ ಆ ದಿನ ಸಂಜೆ ಗಂಗೆಕೊಳ್ಳದ ಬಯಲಲ್ಲಿ ಆಗುವ ಕೋಳಿಯಂಕದ ಮಾತಾಡಹತ್ತಿದ. 'ಬೆಳ್ಳು ಪಂಚರಂಗಿ' ಎಂದು ಕೋಳಿಹುಂಜದ ಮಾತಿನಲ್ಲಿ ಮುಳುಗಿದಾಗ ಸೀತಕ್ಕ ಇನ್ನೊಮ್ಮೆ ತಾನು ಬಂದ ಕೆಲಸವನ್ನು ಎಚ್ಚರಿಸಬೇಕಾಯಿತು. ನಂತರ ಆ ಮಾತು ಕೋಳಿಯಂಕದ ಹುರುಪಿನ ಮಾತಿನ ಹೊನಲು ಅಲ್ಲೇ ಆರಿತು. ಇನ್ನೊಂದು ಪ್ರಶ್ನೆ ದೇವರಿಗೆ ಹಾಕಿದ, ಪರಿಹಾರಕ್ಕಾಗಿ—